## ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 15-03-2018 ರಂದು ಮಧ್ಯಾಹ್ನ 12:30 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು:-

1. ಡಾ|| ಸುಚೇತನ ಸ್ವರೂಪ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಪಿ.ಜಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀ ಎಸ್.ಎಲ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
7. ಶ್ರೀ ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು.
8. ಡಾ|| ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
9. ಡಾ|| ಲಿಂಗರಾಜ್ .ಕೆ, ರಾಜ್ಯ ಮಾಹಿತಿ ಆಯುಕ್ತರು.
10. ಡಾ|| ಸುನಿಲ್ ಪಂವಾರ್, ಕಾರ್ಯದರ್ಶಿ.
11. ಶ್ರೀ ವೆಂಕಟರವಣಪ್ಪ .ಬಿ, ಅಧೀನ ಕಾರ್ಯದರ್ಶಿ.
12. ಶ್ರೀಮತಿ ಮುದ್ದುರತ್ನಮ್ಮ, ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.

ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

1. ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಎಲ್ಲಾ ಮಾಹಿತಿ ಆಯುಕ್ತರುಗಳಿಗೆ ಸಭೆಗೆ ಸ್ವಾಗತವನ್ನು ಕೋರುತ್ತಾ, ಈ ಹಿಂದೆ ದಿ: 15-11-2017ರಂದು ಸಭೆಯನ್ನು ಕರೆಯಲಾಗಿದ್ದು, ಬಹಳ ಅಂತರದಲ್ಲಿ ಈ ಸಭೆಯನ್ನು ಕರೆಯಲಾಗಿರುತ್ತದೆ. ಹೊಸ ಆಯುಕ್ತರುಗಳ ನೇಮಕಾತಿ ಸಂಬಂಧ ಆಯೋಗದಲ್ಲಿ ಕಛೇರಿ ಕೆಲಸದ ಹಾಗೂ ಇನ್ನಿತರೆ ಕೆಲಸ ಕಾರ್ಯಗಳ ಒತ್ತಡದಿಂದಾಗಿ ಸಭೆಯನ್ನು ಆಯೋಜಿಸುವುದು ತಡವಾಗಿರುತ್ತದೆ. ಇನ್ನು ಮುಂದೆ ತಡವಾಗದಂತೆ ವ್ಯವಸ್ಥೆ ಮಾಡಲಾಗುವುದು ಎಂದು ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

2. ಅನುಪಾಲನಾ ವರದಿ.

ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 15-11-2017ರಂದು ನಡೆದ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಸಮ್ಮುಖದಲ್ಲಿ ನಡೆದ ಸಭೆಯ ನಡವಳಿಯಲ್ಲಿನ ನಿರ್ಣಯಗಳಿಗೆ ತೆಗೆದುಕೊಂಡ ಅನುಪಾಲನ ಕ್ರಮಗಳನ್ನು ಕಾರ್ಯದರ್ಶಿ ಸಭೆಯಲ್ಲಿ ಮಂಡಿಸಿದರು. ಸಭೆಯು ಈ ಕ್ರಮಗಳನ್ನು ಅನುಮೋದಿಸಿತು.

3. ದ್ವಿಚಕ್ರ ವಾಹನಗಳಿಗೆ ಮಾಹಿತಿ ಸೌಧದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ.

ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡವಾದ ಮಾಹಿತಿ ಸೌಧಕ್ಕೆ ವಿಚಾರಣೆಗೆ ಹಾಜರಾಗುವವರಿಗೆ ತಮ್ಮ ದ್ವಿಚಕ್ರ ವಾಹನಗಳನ್ನು ಪಾರ್ಕಿಂಗ್ ಮಾಡಿಸಲು, ಮಾಹಿತಿ ಸೌಧದ ಹಿಂಭಾಗದಲ್ಲಿ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆಯನ್ನು ಮಾಡುವಂತೆ ಕೋರಿ ಬಂದಿರುವ ಮನವಿ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಇದನ್ನು ನಿರ್ವಹಿಸಲು ಸಿಆಸುಇ ಇಲಾಖೆ ವತಿಯಿಂದ ಬಹುಮಹಡಿಗಳ ಕಟ್ಟಡದಲ್ಲಿ ಪಾರ್ಕಿಂಗ್ ನಿರ್ವಹಣೆ ಮಾಡುತ್ತಿರುವ ಸಂಸ್ಥೆಯಿಂದಲೇ ಮಾಹಿತಿ ಸೌಧದಲ್ಲಿ ಪಾರ್ಕಿಂಗ್ ನಿರ್ವಹಣೆ ಮಾಡುವಂತೆ ಸಿಆಸುಇ ಇಲಾಖೆಗೆ ಪತ್ರ ಬರೆಯುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

ಕ್ರಮ: ಕಾರ್ಯದರ್ಶಿ

4. ಬಿ.ಡಿ.ಎ ಮತ್ತು ಬಿ.ಬಿ.ಎಂ.ಪಿ. ಕಛೇರಿಗಳ ಕುರಿತು ಮಾಹಿತಿ ಕೋರಿ ಸಲ್ಲಿಸುವ ಅರ್ಜಿಗಳನ್ನು ಈ ಹಿಂದೆ ಆಯೋಗದಲ್ಲಿ ಅನುಸರಿಸುತ್ತಿದ್ದ ವ್ಯವಸ್ಥೆಯಂತೆ ಪ್ರಾರಂಭಿಸಲು ಮಾನ್ಯ ಮುಖ್ಯ ಮಾಹಿತಿ ಆಯುಕ್ತರಿಗೆ ಸಲ್ಲಿಸಿರುವ ಮನವಿ ಬಗ್ಗೆ.

ಕಾರ್ಯದರ್ಶಿಯವರು ಈ ಹಿಂದೆ ಬಿ.ಡಿ.ಎ ಮತ್ತು ಬಿ.ಬಿ.ಎಂ.ಪಿ ಕಛೇರಿಗಳಲ್ಲಿನ ಸಾರ್ವಜನಿಕರು ಮಾಹಿತಿ ಕೋರಿ ಅರ್ಜಿ ಸಲ್ಲಿಸಲು ಕೇಂದ್ರೀಕೃತ ಮಾಹಿತಿ ಘಟಕ ಮರು ಸ್ಥಾಪಿಸುವಂತೆ ಕೋರಿ ಈ ಕಛೇರಿಗೆ ಸ್ವೀಕೃತವಾಗಿರುವ ಮನವಿಯನ್ನು ಸಭೆಯಲ್ಲಿ ಮಂಡಿಸಿದೆ. ಈ ಸಭೆಯಲ್ಲಿ ಚರ್ಚಿಸಲಾಗಿ ಈ ಸಂಬಂಧ ಬಿ.ಡಿ.ಎ ಮತ್ತು ಬಿ.ಬಿ.ಎಂ.ಪಿ ಮುಖ್ಯಸ್ಥರು, ಬೆಂಗಳೂರು ಪೋಲೀಸ್ ಆಯುಕ್ತರು ಮತ್ತು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲು ನಿರ್ಣಯಿಸಲಾಯಿತು.

ಕ್ರಮ: ಕಾರ್ಯದರ್ಶಿ

5. ದ್ವಿತೀಯ ಮೇಲ್ಮನವಿ ಅರ್ಜಿಗಳ ಕಾಲವಿಳಂಬ ಮನ್ನಾ ನಿಗದಿಗೆ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿಯವರ ಹಂತದಲ್ಲಿ ಕಾಲ ನಿಗದಿಪಡಿಸುವ ಬಗ್ಗೆ.

ದ್ವಿತೀಯ ಮೇಲ್ಮನವಿ ಅರ್ಜಿಗಳ ಕಾಲವಿಳಂಬ ಮನ್ನಾ ಬಗ್ಗೆ ಅನೇಕ ಅರ್ಜಿಗಳು ಸ್ವೀಕೃತವಾಗುತ್ತಿದ್ದು, ಈ ಸಂಬಂಧ ನಿಯಮ ರೂಪಿಸುವಂತೆ ಕಾರ್ಯದರ್ಶಿಗಳು ಸಭೆಯನ್ನು ಕೋರಿದರು ಸಭೆಯಲ್ಲಿ ಚರ್ಚಿಸಲಾಗಿ ಕಾಲವಿಳಂಬ ಮನ್ನಾ ವಿಷಯವು ಪ್ರತಿ ಪ್ರಕರಣಕ್ಕೆ ಪ್ರತ್ಯೇಕವಾಗಿ ಸಂದರ್ಭಾನುಸಾರ ನೋಡಿ ನಿರ್ಣಯಿಸಬೇಕಾಗಿರುತ್ತದೆ. ಆದುದರಿಂದ ಕಾಲವಿಳಂಬ ಮನ್ನಾ ಬಗ್ಗೆ ಸಾಮಾನ್ಯ ನಿಯಮ ರೂಪಿಸುವುದು ಸೂಕ್ತವಲ್ಲ. ಆದುದರಿಂದ ಪ್ರತಿ ಪ್ರಕರಣವನ್ನು ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ನಿರ್ಧರಿಸಲು ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ

6. ಬಾಕಿ ಉಳಿದಿರುವ ಕಡತಗಳನ್ನು ಹೊಸ ಆಯುಕ್ತರುಗಳಿಗೆ ಹಂಚಿಕೆ ಮಾಡುವ ಬಗ್ಗೆ.

ಈ ಹಿಂದೆ ಕೋರ್ಟ್ ಹಾಲ್‌ಗೆ ಹಂಚಿಕೆಯಾಗಿದ್ದ ಪ್ರಕರಣಗಳು ವಿಚಾರಣೆಯಾಗದೆ ಕಛೇರಿ ಶಾಖೆಗೆ ಹಿಂದಿರುಗಿಸಿದೆ ಸದರಿ ಪ್ರಕರಣಗಳನ್ನು ಮರುಹಂಚಿಕೆ ಮಾಡಲು ಕಾರ್ಯದರ್ಶಿಯವರು ಸಭೆಯನ್ನು ಕೋರಿದರು. ಸಭೆಯಲ್ಲಿ ಚರ್ಚಿಸಲಾಗಿ ಪ್ರಕರಣಗಳ ಹಂಚಿಕೆ ವಿಚಾರಣೆಯಾಗಿ ಮುಖ್ಯ ಮಾಹಿತಿ ಆಯುಕ್ತರ ನಿರ್ಧಾರ ಅಂತಿಮ ಎಂದು ನಿರ್ಧರಿಸಲಾಯಿತು.

ಕ್ರಮ: ಕಾರ್ಯದರ್ಶಿ

7. ಆಯೋಗದ ಮಾನ್ಯ ಆಯುಕ್ತರುಗಳ ನ್ಯಾಯಾಲಯ ಸಭಾಂಗಣಗಳ ಬದಲಾವಣೆ ಮಾಡುವ ಬಗ್ಗೆ.

ಆಯೋಗದಲ್ಲಿನ ಆಯುಕ್ತರುಗಳು ತಮ್ಮ ಆಪ್ತಶಾಖೆಯೊಂದಿಗೆ ನ್ಯಾಯಾಲಯ ಸಭಾಂಗಣವನ್ನು ವರ್ಗಾವಣೆ ಮಾಡುವುದು ಸೂಕ್ತವಲ್ಲವೆಂದು ಹಾಗೂ ಈ ಕುರಿತು ಇನ್ನು ಮುಂದೆ ಆಯುಕ್ತರುಗಳ ಕ್ರಮಾನುಸಾರ ತಮ್ಮ ನ್ಯಾಯಾಲಯ ಸಭಾಂಗಣಗಳ ಸಂಖ್ಯೆಯನ್ನು ಬದಲಾವಣೆ ಮಾಡಿಕೊಳ್ಳುವುದು ಸೂಕ್ತವೆಂದು ಆಯೋಗದ ಎಲ್ಲಾ ಮಾನ್ಯ ಆಯುಕ್ತರುಗಳು ಒಮ್ಮತದಿಂದ ಒಪ್ಪಿ ಈ ಬಗ್ಗೆ ಕ್ರಮತೆಗೆದುಕೊಳ್ಳುವಂತೆ ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

8. ಮಾಹಿತಿ ಆಯೋಗಕ್ಕೆ ಅವಶ್ಯವಿರುವ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಕಿಯೋನಿಕ್ಸ್ ಸಂಸ್ಥೆಯಿಂದ ಪಡೆಯುವ ಬಗ್ಗೆ.

ಮಾಹಿತಿ ಆಯೋಗದಲ್ಲಿ ಬಹುಪಾಲು ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುತ್ತಿದ್ದು, ಈ ಸಿಬ್ಬಂದಿಯ ಸೇವೆಯನ್ನು ಖಾಸಗಿ ಮಾನವ ಸಂಪನ್ಮೂಲ ಸೇವೆಯಿಂದ ಪಡೆಯಲಾಗುತ್ತಿದ್ದು, ಈ

ಸಂಸ್ಥೆಯ ಸೇವಾ ಅವಧಿ ಮಾರ್ಚ್ 31 2018ಕ್ಕೆ ಮುಗಿಯಲಿದ್ದು, 01.04.2018ರಿಂದ ಹೊರಗುತ್ತಿಗೆ ಸೇವೆಯನ್ನು ಸರ್ಕಾರಿ ಸಂಸ್ಥೆಯಾದ ಕಿಯೋನಿಕ್ಸ್‌ಗೆ 4ಜಿ ವಿನಾಯಿತಿ ಇರುವುದರಿಂದ ಸದರಿ ಸಂಸ್ಥೆಯಿಂದ ಸೇವೆ ಪಡೆಯಲು ಸಭೆ ನಿರ್ಣಯಿಸುವಂತೆ ಕೋರಿದೆ. ಸಭೆಯಲ್ಲಿ ಚರ್ಚಿಸಲಾಗಿ ಕಿಯೋನಿಕ್ಸ್ ಸಂಸ್ಥೆ ಸಮಯಕ್ಕೆ ಸರಿಯಾಗಿ ಸಿಬ್ಬಂದಿಗೆ ವೇತನ ನೀಡುವುದನ್ನು ಖಾತರಿ ಪಡಿಸಿಕೊಂಡು ನಂತರ ಕಾರ್ಯಾದೇಶ ನೀಡಲು ಸಭೆ ನಿರ್ಧರಿಸಲಾಯಿತು.

ಕ್ರಮ: ಕಾರ್ಯದರ್ಶಿ

**9. ಮಾಹಿತಿ ಆಯೋಗದ ಕಟ್ಟಡಕ್ಕೆ ಪ್ರತ್ಯೇಕವಾಗಿ ಬಿ.ಎಸ್.ಎನ್.ಎಲ್., ನ ಲೀಸ್ಡ್ ಲೈನ್ ಪಡೆಯುವ ಬಗ್ಗೆ.**

ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡವಾದ ಮಾಹಿತಿ ಸೌಧಕ್ಕೆ ಪ್ರತ್ಯೇಕವಾದ ಅಂತರ್ಜಾಲದ leased lineನ್ನು ಪಡೆಯುವ ಅವಶ್ಯಕತೆಯಿದ್ದು ಆದುದರಿಂದ ಸಭೆ ಈ ಬಗ್ಗೆ ನಿರ್ಧರಿಸಲು ಕಾರ್ಯದರ್ಶಿಯವರು ಕೋರಿದರು. ಸಭೆಯಲ್ಲಿ ಚರ್ಚಿಸಲಾಗಿ ಬಿಎಸ್‌ಎನ್‌ಎಲ್ ವತಿಯಿಂದ leased lineನ್ನು ಪಡೆಯಲು ತೀರ್ಮಾನಿಸಲಾಯಿತು. ಮುಂದುವರೆದು, ಮೊಬೈಲ್ ನೆಟ್‌ವರ್ಕ್ ಸುಧಾರಣೆಗಾಗಿ Booster ಅಳವಡಿಕೆಗೆ ಪರಿಶೀಲಿಸುವಂತೆ ಸಭೆ ನಿರ್ಣಯಿಸಿ ಕಾರ್ಯದಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

**10. ಕಂಪ್ಯೂಟರ್, ಪ್ರಿಂಟರ್, ಇಂಟರ್‌ನೆಟ್ ಹಾಗೂ ಇತರೆ ತಾಂತ್ರಿಕ ನಿರ್ವಹಣೆಗಾಗಿ ತಾಂತ್ರಿಕ ಸಹಾಯಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸುವ ಬಗ್ಗೆ.**

ಮಾಹಿತಿ ಸೌಧದಲ್ಲಿನ ಕಂಪ್ಯೂಟರ್, ಪ್ರಿಂಟರ್, ಇಂಟರ್‌ನೆಟ್ ಹಾಗೂ ಇತರೆ ತಾಂತ್ರಿಕ ದೋಷಗಳನ್ನು ಆ ತಕ್ಷಣದಲ್ಲಿಯೇ ಸರಿ ಪಡಿಸಲು ಒಬ್ಬರು ಹೊರಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಸಹಾಯಕರನ್ನು ನೇಮಿಸಿಕೊಳ್ಳುವ ಅವಶ್ಯಕತೆಯಿರುವುದರ ಬಗ್ಗೆ ಸಭೆಗೆ ಕಾರ್ಯದರ್ಶಿಗಳು ತಿಳಿಸಿದರು. ಸಭೆಯಲ್ಲಿ ಚರ್ಚಿಸಿ ಒಬ್ಬ ನುರಿತ ತಾಂತ್ರಿಕ ಸಹಾಯಕರನ್ನು ಹೊರಗುತ್ತಿಗೆ ಮೇಲೆ ನೇಮಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

**11. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

1. ಕರ್ನಾಟಕ ಮಾಹಿತಿ ಆಯೋಗದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸಲು ಮಾನವ ಹಕ್ಕು ಆಯೋಗ ಹಾಗೂ ಇತರೆ ಇಲಾಖೆಗಳಿಂದ ವಿವರವನ್ನು ಪಡೆದುಕೊಂಡಿದ್ದು, ವೇತನ ಹೆಚ್ಚಳಕ್ಕೆ ಕ್ರಮವಹಿಸಲಾಗುವುದೆಂದು ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಸಭೆಯಲ್ಲಿ ಮಾನ್ಯ ಶ್ರೀ ಎಲ್.ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರುರವರು ವೇತನ ಹೆಚ್ಚಳ ಸಂಬಂಧ ಸಿದ್ಧಪಡಿಸಿರುವ ಕರಡು ತಖ್ತೆಯನ್ನು ಮಂಡಿಸಿದರು. ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ತಖ್ತೆ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಭೆ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

2. ಮಾಹಿತಿ ಆಯೋಗದ ಹಳೆಯ ಕಡತಗಳನ್ನು ನಾಶ ಪಡಿಸಲು ನಿಯಮ ರೂಪಿಸುವುದು ಅವಶ್ಯಕತೆಯಿರುವುದರಿಂದ ಮಾನ್ಯ ಕೇಂದ್ರ ಮಾಹಿತಿ ಆಯೋಗದ ಮಾದರಿಯಲ್ಲಿ ಕರಡು ನಿಯಮ ರೂಪಿಸಲಾಗಿದ್ದು, ಇದನ್ನು ಅನುಮೋದಿಸುವಂತೆ ಸಭೆಯನ್ನು ಕಾರ್ಯದರ್ಶಿಯವರು ಕೋರಿದರು. ಹಳೇ ಕಡತ ಸಂಬಂಧ ರಚಿಸುವ ನಿಯಮಾವಳಿಯನ್ನು ಸಭೆಯಲ್ಲಿ ಅನುಮೋದಿಸಲಾಯಿತು.

ಕ್ರಮ: ಕಾರ್ಯದರ್ಶಿ

3. ಕರ್ನಾಟಕ ಮಾಹಿತಿ ಆಯೋಗದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗಳಿಗೆ ಇತರೆ ಸರ್ಕಾರಿ ಇಲಾಖೆ/ಸಂಸ್ಥೆಗಳಲ್ಲಿ ನೀಡುತ್ತಿರುವ ನಿಯೋಜನೆ ಭತ್ಯೆಯನ್ನು. ದೂರವಾಣಿ ಬಿಲ್ಲು ಹಾಗೂ ಮೊಬೈಲ್ ಕರೆನ್ಸಿಯನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

4. ಎಲ್ಲಾ ಮಾಹಿತಿ ಆಯುಕ್ತರುಗಳು ಸಭೆಯಲ್ಲಿ ಈಗ ಒದಗಿಸಲಾಗಿರುವ ವಾಹನಗಳ ಬದಲಾಗಿ ಇನೋವಾ ವಾಹನಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿ. ಈ ವಿಷಯ ಚರ್ಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಕ್ರಮ: ಕಾರ್ಯದರ್ಶಿ

ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು